ಶ್ರೀ ಜೆ. ಎಲ್. ಕಬಾಡಿ.—ಅಕ್ವಿಜಿಷನ್ ಪ್ರೊಸಿಡಿಂಗ್ ಎಂದು ಮುಗಿಯಿತು. ಆವರು ಎಂದು ಅಲ್ಲಿಗೆ ಹೋಗಿದ್ದಾರೆ? ಆವರು ಒಂದು ವರ್ಷದ ಕೆಳಗೆ ಮನೆಗಳನ್ನು ಅಲ್ಲಿ ಕಟ್ಟಿಕೊಂಡಿದ್ದಾರೆ. ಅಕ್ವಿಜಿಷನ್ ಪ್ರೊಸಿಡಿಂಗ್ ಎಂದು ಮುಗಿಯಿತು ಎನ್ನುವುದನ್ನು ಹೇಳುತ್ತೀರಾ ? ಕೆಲವು ಜನರು ೫—೧೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಅಲ್ಲಿ ಮನೆಗಳನ್ನು ಕಟ್ಟಿ ಕೊಂಡಿದ್ದಾರೆ. ಉರ್ದು ಟ್ರೈನಿಂಗ್ ಕಾಲೇಜಿಗೆ ಬೇರೆ ಜಾಗವನ್ನು ಕೊಡಬಹುದಿತ್ತು. ಮತ್ತು ಜನರಿಗೆ ಆಗತಕ್ಕ ತೊಂದರೆಯನ್ನು ತಾವು ತಪ್ಪಿಸಲಿಕ್ಕೆ ಸಾಧ್ಯವಾಗುತ್ತಿರಲಿಲ್ಲವೇ ?

ಶ್ರೀ ಎಚ್. ಡಿ. ದೇವೇಗೌಡ.—ದಯಮಾಡಿ ಒಂದು ದುರಭ್ಯಾಸವನ್ನು ತಾವು ನಿಲ್ಲಿಸಬೇಕು. ಏನೆಂದರೆ ಸದಸ್ಯರುಗಳು ಆಫೀಸರ್ಸ್ ಗ್ಯಾಲರಿ ಹತ್ತಿರ ನಿಂತುಕೊಂಡು ಮಾತನಾಡುತ್ತಿದ್ದಾರೆ.

ಅಧ್ಯಕ್ಷರು.—ಮಂತ್ರಿಗಳು ಏನಾದರೂ ಮಾಹಿತಿ ಬೇಕಾದರೆ ಸೆಕ್ರೆಟರಿಗಳನ್ನು ಕೇಳಬಹುದು. ಮೆಂಬರ್ಸ್‌ಗಳೂ ಸಹ ಲಾಂಜ್‌ದಲ್ಲಿ ಹೊರಗಡೆ ಕರೆದುಕೊಂಡು ಹೋಗಿ ಮಾತನಾಡಬಹುದು. ದಯಮಾಡಿ ಇಲ್ಲಿಯೇ ಮಾತನಾಡುವಂಥ ಅಭ್ಯಾಸವನ್ನು ಆವರು ಬಿಟ್ಟು ಬಿಡ ಬೇಕು ಮಾನ್ಯ ಸದಸ್ಯರು ಇಲ್ಲೇ ನಿಂತುಕೊಂಡು ಮಾತನಾಡ ತಕ್ಕ ಈ ಒಂದು ಅಭ್ಯಾಸವನ್ನು ದಯಮಾಡಿ ನಿಲ್ಲಿಸಬೇಕು.

ಶ್ರೀ ಜೆ. ಎಲ್. ಕಬಾಡಿ.—ಬಿಜಾಪುರದ ಎಂ.ಪಿ.ಗಳು ಒಬ್ಬರಿಂದ ಇಂದಿರಾನಗರದ ಉದ್ಘಾಟನೆ ಯಾಯಿತು. ಸರ್ಕಾರದ ರಾಜ್ಯಮಂತ್ರಿಗಳು ಇದರ ಬಗ್ಗೆ ಒಂದು ಆಶ್ವಾಸನೆಯನ್ನು ನಮಗೆ ಕೊಟ್ಟಿದ್ದರು, ಆವರಲ್ಲಿ ನಮಗೆ ನಂಬಿಕೆ ಇತ್ತು ಆವರು ನಂಬಿಕೆಯನ್ನು ಕಳೆದು ಕೊಂಡಿದ್ದರಿಂದ ಈ ಪರಿಸ್ಥಿತಿ ಬಂದಿದೆ. ಬಡವರಿಗೆ ಅಲ್ಲಿ ಬಹಳ ನಷ್ಟವಾಗಿದೆ, ಇದಕ್ಕೆ ಯಾರು ಜವಾಬ್ದಾರರು ? ಆದ್ದರಿಂದ ನಾನು ಕೇಳುತ್ತೇನೆ, ಅಕ್ವಿಜಿಷನ್ ಪ್ರೊಸಿಡಿಂಗ್ಸ್ ಎಂದು ಆಯಿತು, ಮಾನ್ಯ ರಾಥೋಡ್ ಆವರು ಇದನ್ನು ಉದಾಘಟನೆಮಾಡಿದರು ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಡಿ. ಕೆ ನಾಯ್ಕರ್.—ಮಾನ್ಯ ರಾಥೋಡ್ ಆವರು ಇದನ್ನು ಉದ್ಘಾಟನೆ ಮಾಡಿದ ವಿಷಯ ನನಗೆ ತಿಳಿದು ಬಂದಿಲ್ಲ. ಅಕ್ವಿಜಿಷನ್ ಪ್ರೋಸಿಡಿಂಗ್ಸ್ ರೆವಿನ್ಯೂ ಡಿಪಾರ್ಟಮೆಂಟ್‌ನವರ ಡೈರೆಕ್ಷನ್ ಮುಂಖಾಂತರ ಆಗಿರುತ್ತದೆ. ಮಾನ್ಯ ರಾಥೋಡ್ ಆವರು ಇದು ಮುನಿಸಿಪಲ್ ಏರಿಯಾ ಎಂದು ತಿಳಿಸಿದ್ದರ ಮೇಲೆ ನಾನು ಜಿಲ್ಲಾಧಿಕಾರಿಗಳಿಗೆ ಫೋನ್ ಮುಖೇನ ಮಾಹಿತಿಯನ್ನು ಕೇಳಿಕೊಂಡೆ ಇದನ್ನು ಸರ್ಕಾರದವರು ಪಬ್ಲಿಕ್ ಪರ್ಪಸ್‌ಗೆ ಲಕ್ಷಗಟ್ಟಲೆ ಹಣ ಕೊಟ್ಟು ತೆಗೆದುಕೊಂಡಿದ್ದಾರೆ, ಆವರು ಅಲ್ಲಿ ಇರಲಿಕ್ಕೆ ಬರುವುದಿಲ್ಲ ಎಂದು ಒಂದು ಸಪರೇಟ್ ಪ್ರಾವಿಷನ್ ಮಾಡಿ ಎವಿಕ್ಟ ಮಾಡುವಂತೆ ಮಾಡಿದ್ದೇವೆಂದು ಆವರು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).— ನಾನು ಕ್ರಿಸ್ಟಲ್‌ಗ್ಲಾಸ್ ಫ್ಯಾಕ್ಟರಿಯಲ್ಲಿ ಟ್ರೇಜ್ ಯೂನಿಯನ್ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಟ್ರೇಡ್ ಯೂನಿಯನ್ ಆವರನ್ನು ಪೋಲೀಸರಿಂದ ಹೊಡೆಸಿದ್ದಾರೆ. ನಾನು ಸರ್ಕಲ್ ಇನ್ಸ್‌ಪೆಕ್ಟರ್ ಮೇಲೆ ಗುರುತರವಾದ ಆಪಾದನೆಯನ್ನು ಮಾಡಿದ್ದೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಮಾಡುತ್ತೇನೆಂದು ಹೇಳಿದ್ದರು. ಆದರಂತೆ ಆವರು ಹೇಳಿಕೆಯನ್ನು ಮಾಡಬೇಕು.

STATEMENT OF THE CHIEF MINISTER

re. Clashes between two unions at the Crystal Glass factory.—

SRI D. DEVARAJ URS (Chief Minister).—In the Mysore Crystal Glass Factory situated at Nagavara in Kadagondanahalli Police Station limits, the total strength of labour is 750. There are two unions amongst the employees of the factory. One is called the "Mysore Crystal Glass Factory Industries welfare Union" and the other is call d "Bangalore Industrial Estate and General workers Union". The former is controlled by the Management and the latter is controlled by the C.P.I, Majority of the workers belong to the Union led by the C.P I. Recently both the Unions presented their demands to the Management regarding wages, D.A. and other facilities. The managemant conceded to a certain extent their request for enhancement of wages.

(ಶ್ರೀ ದೇವೇಗೌಡರ ಬಳಿ ಶ್ರೀ ಹೆಚ್. ಟಿ. ಕೃಷ್ಣಪ್ಪನವರು ಬಂದು ಮಾತನಾಡಿದರು)

ಶ್ರೀ ಡಿ. ದೇವರಾಜ ಅರಸ್.— ಅಧ್ಯಕ್ಷರೇ, ತಾವು ಈಗತಾನೇ ಈ ರೀತಿ ಬಂದು ಮಾತನಾಡ ಬಾರದು ಎಂದು ರೂಲಿಂಗ್ ಕೊಟ್ಟಿದೀರಿ, ಈಗ ಅವರು ಈ ರೀತಿ ಬಂದು ಮಾತನಾಡುತಿದಾರಲ್ಲಾ?

ಶ್ರೀ ಹೆಚ್. ಡಿ. ದೇವೇಗೌಡ —ಮೆಂಬರ್ಸ್ ಸಂಭಾಷಣೆಗೂ ತಾವು ಮಾಡುವ ಸಂಭಾಷಣೆಗೂ ವ್ಯತ್ಯಾಸ ಇದೆ. ಮೆಂಬರ್ಸ್ ಸಂಭಾಷಣೆ ಬಗ್ಗೆ ಶ್ರೀಮಾನ್ ವೆಂಕಂತ ಬಾಳಿಗರವರು ಇದ್ದಾಗಲೇ ಒಂದು ರೂಲಿಂಗ್ ಕೊಟ್ಟಿದಾರೆ.

ಶ್ರೀ ಡಿ. ದೇವರಾಜ ಅರಸ್.—ಹಾಗೋ? ಸರಿ ಹಾಗದರೆ. The workers belonging to the Union led by the CPI were not satisfied with the concesions given. They adopted slow down tactics and indulged in damaging the property of the factory. On 14 April 1975 at about 8 P M, the Management warned the labourers against their 'go slow' tactics. The supporters of the C P.I. Union assembled near the canteen of the factory with the idea of causing trouble to the Management, At that time one Shri Samiulla a supporter of the Management a sa il ed one Shri Neshan, supporter of the C.P.I. inside the factory premises. This provoked the C. P.I. union members and clash ensued between workers of the two rival unions. In this clash there was mutual assault and also damage to the property of the factory. In this connection a case and counter case are registered for investigation. In the crime No, 73 of 75 un ler sections 147, 148, 324 read with 34 IPC registered on the complaint of Shri Neshan against Shri Samiulla, Mani and 53 others, suppo ters of the Management; Shri Samiulla and 9 others were arrested and produced before the Court which released them on conditional bail on 15th April 1975. In crime No. 74 of 75 under section 143, 147, 148, 327, 426 read with section 1 9 IPC registered on the complaint of Shri Ramanatha Gupt- against Neshan and 60 others (supporters of the CPI Union) tha accused pe.sons Neshan and 11 others were arrested and produced bee fore the court, They were also released on conditional bail on 15th April 1975.

When the above said clash was going on CPI leaders viz Shri K. M. Shamasun lar and Shri Imtiaz Ahmad assembled with 50 workers in front of the factory and prevented the owners of the factory from going inside. They also pelted stones on the factory cars, as a result of which two cars were heavily damaged Then they proc eded towards Nagavara village which is about 3/4 mile from the factory and tr spassed into the houses of Shri Dulalamanna and three other workers of the Management side. They assaulted the workers and the members of their families, and caused damage to their house hold articles including doors and tiles.

In this connection on the complaint of Shri Dalalamanna a case in crime No. 75 of 75 under sections 143. 147, 148, 324 and 426 read with 149 IPC is registered and the accused Shri K M Shama Sundar and 4 others were arrested and produced before the Court which released them on conditional bail. On getting infrormation

about the trouble in Nagavara village the Police rushed to the spot and dispersed the members of the unlawful assembly. At that time the miscrents pelted stones at the Police van. They also switched off the street lights of the village and in the darkness continued to throw stones at the Police. At this stage 12 tear gas shell were burst to disperse the unruly mob. The situation was brought under control under the direct supervision of the D.C P., Law and Order who was present at the place. All the three cases registered in this conection are under investigation.

It is not correct to state that at 10 P.M. the Sub Inspector of Police, Kadagondanahalli took Shri Shama Sundar, The Union Secretary and Shri Imtiaz Ahmed (Dismissed employee) in Police van from Kadgagondanahalli, requesting them to pacify the crowd. In fact they were already there by about 8-30 P M. and it is at their instigation the assualts and damage to property at Nagavara village took place.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿರುವುದರಲ್ಲಿ ಈಗ ಪೋಲೀಸಿನವರು ಏನು ವರದಿ ಕೊಟ್ಟಿದ್ದಾರೆ ಅದನ್ನು ಮಾತ್ರ ಹೇಳಿದ್ದೀರಿ. ಇದರಲ್ಲಿ ಮುಖ್ಯವಾಗಿ ನಾನು ಹೇಳುವುದೂ ಏನೆಂದರೆ ವರ್ಕರ್ಸ್ ಹತ್ತಿರ ಕಲ್ಲು ಏಟು ಹೊಡೆಸಿದರು ಹಾಗೆ ಮಾಡಿದರು, ಹೀಗೆ ಮಾಡಿದರು ಅದರ ಬಗ್ಗೆ ಇನ್ವೆಸ್ಟಿಗೇಷನ್ ನಡೆಯುತ್ತಾ, ಇದೆ ಎಂದು ತಾವು ಹೇಳಬಹುದು. ಇದರಲ್ಲಿ ಕಲ್ಲು ಏಟು ಯಾರು ಹೊಡೆದರು ಅದು ಬೇರೆ ಸಮಾಚಾರ ಅಲ್ಲದೆ ಇದರ ಬಗ್ಗೆ ಇನ್ವೆಸ್ಟಿಗೇಷನ್ ನಡೆಯುತ್ತಾ ಇರುವುದರಿಂದ ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ ಒಂದು ವಿಷಯ ಏನೆಂದರೆ ಟ್ರೇಡ್ ಯೂನಿಯನ್ ಲೀಡರ್ಸ್ ಆದ ಶ್ರೀ ಶಾಮಸುಂದರ್‌ರವರಿಗೆ ಈ ವಿಷಯ ರಾತ್ರಿ ೯ ಗಂಟೆಗೆ ತಿಳಿದ ಮೇಲೆ ಅವರು ಆ ಜಾಗಕ್ಕೆ ಬಂದರು. ಈ ಮಧ್ಯೆ ಏನಾಯಿತು ಎಂದರೆ ಕಾಡುಗೊಂಡನಹಳ್ಳಿ ಪೋಲೀಸ್ ಸಬ್ ಇನ್ಸ್‌ಪೆಕ್ಟರು ಅವರನ್ನು ಪೋಲೀಸ್ ಸ್ಟೇಷನ್‌ಗೆ ಕರೆಸಿಕೊಂಡು ಅಲ್ಲಿ ಗಲಾಟೆ ನಡೆಯುತ್ತಾ ಇದೆ, ಅದನ್ನು ಬಂದು ಬಿಡಿಸಿರಿ ಎಂದು ಹೇಳಿ ಅವರನ್ನು ಪೋಲೀಸ್ ವ್ಯಾನ್‌ನಲ್ಲಿ ಕರೆದುಕೊಂಡು ಹೋದರು. ಫ್ಯಾಕ್ಟರಿ ಎದುರಿಗೆ ಆ ವ್ಯಾನ್‌ನನ್ನು ನಿಲ್ಲಿಸಿ ಅವರು ಹೊರಬಂದಮೇಲೆ ಆ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಅಸಿಸ್ಟೆಂಟ್ ಕಮೀಷನರ್ ಆಫ್ ಪೋಲೀಸ್‌ನವರು ಇವರೂ ಕೂಡ ಅಲ್ಲಿ ಇದ್ದರು ಅಂತ ಅವರನ್ನು ಚೆನ್ನಾಗಿ ಹೊಡೆದಿದ್ದಾರೆ. ಈ ಒಂದು ಅಪಾದನೆಯನ್ನು ನಾನು ನಿನ್ನೆ ದಿವಸ ಮಾಡಿದ್ದೇನೆ. ತಾವು ಹೇಳುತ್ತೀರಿ ಇದರ ಬಗ್ಗೆ ಇನ್ವೆಸ್ಟಿಗೇಷನ್ ಮಾಡುತ್ತಿದ್ದೇವೆ ಎಂದು ಇದರಲ್ಲಿ ನಮ್ಮವರೇ ತಪ್ಪುಮಾಡಿರಲಿ ಅಥವಾ ಅಧಿಕಾರಿಗಳೇ ತಪ್ಪುಮಾಡಿರಲಿ ತಪ್ಪು ಮಾಡಿದವರು ಶಿಕ್ಷೆ ಅನುಭವಿಸಲು ತಯಾರಾಗಿದ್ದಾರೆ.

ಎರಡನೆಯದಾಗಿ he might have assaulted ಅಂತ ಹೇಳಿದ್ದೀರಿ. ಅಲ್ಲಿ ಮಾತ್ರ ಹೊಡೆಯಲಿಲ್ಲ ಅಂತ ಹೇಳಬಹುದು. ನಾನು ಹೇಳುವುದು ಏನೆಂದರೆ ಅವರನ್ನು ಪೋಲೀಸಿನವರೇ ಕರೆಸಿ ಸ್ಟೇಷನ್‌ಗೆ ಕರೆದುಕೊಂಡು ಬಂದು ಶರಣಂಬಿಚ್ಚಿಸಿ ಚೆನ್ನಾಗಿ ಹೊಡೆದು ಲಾಕಪ್‌ನಲ್ಲಿ ಇಟ್ಟಿದ್ದಾರೆ ಮತ್ತು ಇಂತಿಯಾಜ್ ಅಹಮದ್‌ನನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಹೊಡೆಯುವ ಅವಶ್ಯಕತೆ ಏನಿತ್ತು ? ಇದನ್ನು ಇನ್‌ವೆಸ್ಟಿಗೇಷನ್ ಮಾಡಿಸುತ್ತೀರಾ ?

ಮೂರನೆಯದಾಗಿ ಒಂದು ಇನ್‌ವೆಸ್ಟಿಗೇಷನ್ ಏನೇ ಆಗಲಿ ಒಬ್ಬ ಪ್ರೈವೇಟ್ ಪರ್ಸನ್ ಕೋರ್ಟ್‌ಗೆ ಹೋಗುವ ಅಧಿಕಾರ ಇದೆ ಎಂದು ತಾವು ಹೇಳುತ್ತೀರಿ. ಇನ್‌ಭಾರ್ಜ್ ಆಫ್ ಪಬ್ಲಿಕ್ ಡ್ಯೂಟೀಸ್‌ನಲ್ಲಿರ ತಕ್ಕ ಅಧಿಕಾರಿಗಳು ವ್ಯಾಪ್ತಿಮೀರಿ ಹೋಗಿದ್ದರೆ ಅವರನ್ನು ಕೋರ್ಟಿನಲ್ಲಿ ಪ್ರಾಸಿಕ್ಯೂಟ್ ಮಾಡಬೇಕಾದರೆ ಸರ್ಕಾರದವರಿಂದ ಪರ್ಮಿಷನ್ ತೆಗೆದುಕೊಳ್ಳಬೇಕು, ಅವರ ಮೇಲೆ ಕೇಸು ಹಾಕುವುದಕ್ಕೆ ಸರ್ಕಾರದವರು ಪರ್ಮಿಷನ್ ಕೊಡುತ್ತಾರೆಯೇ ? ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಅಸಿಸ್ಟೆಂಟ್ ಕಮೀಷನರ್ ಆಫ್ ಪೋಲೀಸ್ ಇವರಿಬ್ಬರೂ ಕೂಡ ಅಲ್ಲೇ ಇದ್ದರು. ಆದುದರಿಂದ ನಾನು ಕೇಳಿದ ಮೂರು ಕ್ಲಾರಿಫಿಕೇಷನ್ ಬಗ್ಗೆ ತಾವು ಸ್ಪಷ್ಟವಾಗಿ ಉತ್ತರ ಹೇಳಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಇದರ ಜೊತೆಗೆ ನಾಗವಾರದ ವಿಲೇಜ್‌ನಲ್ಲಿ ಮ್ಯಾನೇಜ್‌ಮೆಂಟ್ ಡಿಸ್ಪ್ಯೂಟ್ಸ್‌ಗೆ ಸೇರಿದ ಮನೆಯೊಂದನ್ನು ಕೂಡ ಡ್ಯಾಮೇಜ್ ಮಾಡಿದ್ದಾರೆ.

SRI M. S. KRISHANAN.—It is absolutely a false statement. It is a tissue of lies by the police.

SRI D. DEVARAJ URS.—How could it be false when the house of one worker who is an employee of the factory-he is not a Kannadiga and he comes from other regions from northern part of the country-is damaged in Nagavara village ?

SRI M. S. KRISHNAN.—Even about that you find out the truth.

SRI D. DEVARAJ URS—.That is why cases have been filed. There are cases where investigation is going on. Even before bringing this motion the hon. member did tell me that that person has not been properly treated and police beat him. I have told the police that if it were so, it is not correct, and they will have to undergo disciplinary action. Now he asserts that they have beaten the workers. I will look into the matter. I may state one thing and that is that no police officer has a right to beat any worker, or leader or Trade Union leaders, to whichever party he belongs to. Therefore, I personally feel-I can straightaway state as Government policy—that police officers should not indulge in beating the Trade Union Leaders or any leaders or workers. I must therefore look into what the hon. member alleges.

SRI M. S. KRISHNAN.—Will you give permission for prosecution ?

SRI D. DEVARAJ URS.—If there is any such representation I shall certainly consider it.

ಶ್ರೀ ಹೆಚ್. ಟಿ. ಕೃಷ್ಣಪ್ಪ .. ನಾನು ಇಲ್ಲಿ ಸರ್ಕಾರದ ಗಮನವನ್ನು ನಮ್ಮ ತಾಲ್ಲೂಕಿನ ಅರಸಾಪುರ ಕೆರೆ ಬಗ್ಗೆ ಸೆಳೆಯಬೇಕಾಗಿದೆ.

ಅಧ್ಯಕ್ಷರು.—ಮಾನ್ಯ ಕೃಷ್ಣಪ್ಪನವರು ನೋಟೀಸು ಕಳುಹಿಸಿಲ್ಲ. ದಯವಿಟ್ಟು ಹೀಗೆ ವಿಷಯ ಎತ್ತಿದರೆ ಸರ್ಕಾರ ಹೇಗೆ ಇವಕ್ಕೆ ಉತ್ತರ ಕೊಡಬಹುದು. ದಯವಿಟ್ಟು ಇದರ ಬಗ್ಗೆ ಏನು ವಿವರ ಗಳಿವೆಯೋ ಅದನ್ನು ನನಗೆ ಬಂದು ತಿಳಿಸಬೇಕು. ತಿಳಿಸಿದರೆ ಆಗ ಅದನ್ನು ವಿಚಾರ ಮಾಡಬಹುದು. ದಯವಿಟ್ಟು ನನ್ನ ಚೆಂಬರಿಗೆ ಬರಬೇಕು. ಪೇಪರುಗಳಿದ್ದರೆ ಅದನ್ನು ತೆಗೆದುಕೊಂಡು.

Mismanagement at the Housing Board

ಶ್ರೀ ಕೊಣಂದೂರು ಲಿಂಗಪ್ಪ —ಮಾನ್ಯ ವಸತಿ ಶಾಖೆ ಮಂತ್ರಿಗಳು ಹೌಸಿಂಗ್ ಬೋರ್ಡಿನಲ್ಲಿ ಸುಮಾರು ನಾಲ್ಕೂವರೆ ಲಕ್ಷ ರೂಪಾಯಿಗಳ ದುರ್ವ್ಯವಹಾರ ನಡೆದಿರುವ ಬಗ್ಗೆ ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದ್ದಾರೆ. ಇದರ ಬಗ್ಗೆ ನಿನ್ನೆ ನಾಳೆ ಕೊಡುತ್ತೇನೆಂದು ಹೇಳಿದರೂ ಇದುವರೆಗೂ ಸ್ಟೇಟ್‌ಮೆಂಟು ಬರಲಿಲ್ಲ.

ಶ್ರೀ ಎಂ. ವೈ ಘೋರ್ಪಡೆ.– ನಾಳೆ ಇದರ ಬಗ್ಗೆ ಹೇಳಿಕೆ ಕೊಡುತ್ತೇನೆ.

Purchase of Wheat in U.P State

ಶ್ರೀ ಬಿ. ವಿ. ಕಕ್ಕಿಲಾಯ.—ರೂಲು ೩೧೨ರ ಪ್ರಕಾರ ಒಂದು ನೋಟೀಸ್ ಕೊಟ್ಟಿದ್ದೇನೆ. ನಮ್ಮ ಸರ್ಕಾರ ಯು.ಪಿ. ನಿಂದ ಗೋಧಿ ಕೊಂಡುಕೊಂಡ ಬಗ್ಗೆ ಅನೇಕ ದುರ್ವ್ಯವಹಾರಗಳು ಆಗಿವೆ ಎಂದು ಕಂಡು ಬಂದಿದೆ ಮತ್ತು ಆಗ ಆಹಾರ ಮಂತ್ರಿಗಳಾಗಿದ್ದ ಶ್ರೀ ಕೆ. ಹೆಚ್. ಪಾಟೀಲರವರು ಈ ವ್ಯವಹಾರದಲ್ಲಿದ್ದರು ಮತ್ತು ಅವರು ಈ ಗೋಧಿಯನ್ನು ತರಿಸಿದ್ದು.

ಅಧ್ಯಕ್ಷರು.—ಆಹಾರ ಮಂತ್ರಿಗಳು ಈಗ ಇಲ್ಲ. ನಾಳೆ ಇದರ ಬಗ್ಗೆ ಅಜೆಂಡಾದಲ್ಲಿ ಹಾಕುತ್ತೇನೆ.